ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ರಾಯಚೂರು ಪೀಠ ಸಿಂಧನೂರು

| | | |
|---|---|---|
| ಸಾಕ್ಷಿಯ ಹೆಸರು | : | ದೇವೆಂದ್ರಪ್ಪ |
| ತಂದೆ ಹೆಸರು | : | ಆದಪ್ಪ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಿಳಾಸ | : | ಅಂಕುಶದೊಡ್ಡಿ |

ಸಾಕ್ಷಿಗೆ ದಿನಾಂಕ **27-01-2026** ರಂದು ಪ್ರಮಾಣ ವಚನ ಭೋದಿಸಲಾಯಿತು**.**
**(5** ನೇ ಆರೋಪಿಯ ಸಮ್ಮುಖದಲ್ಲಿ ಪಡಿಯುತ್ತಿರುವ ಸಾಕ್ಷಿ**)**

ಮುಖ್ಯವಿಚಾರಣೆ **:** ಮಾನ್ಯ ಸರ್ಕಾರಿ ಅಭಿಯೋಜಕರಿಂದ **:**

2015 ರಲ್ಲಿ ನನ್ನದು ಅಶೋಕ ಲೈಲ್ಯಾಂಡ್ ಸರಕು ವಾಹನ ಇತ್ತು. ಅದರ ನಂಬರ್ ನೆನಪಿರುವುದಿಲ್ಲ. ಶಿವರಾಜ ಎಂಬಾತ ನನ್ನ ವಾಹನದ ಚಾಲಕನಾಗಿದ್ದನು.

2. ದಿನಾಂಕ 28-11-2015 ರಂದು ನನ್ನ ವಾಹನವನ್ನು ಯಾರು ಬಾಡಿಗೆಯಿಂದ ತೆಗೆದುಕೊಂಡು ಹೋಗಿದ್ದರು ಎಂಬುದು ಗೊತ್ತಿರುವುದಿಲ್ಲ. ನನ್ನ ಚಾಲಕ ವಾಹನವನ್ನು ಬಾಡಿಗೆಯಿಂದ ತೆಗೆದುಕೊಂಡು ಹೋದಾಗ, ಚಲಾಯಿಸುತ್ತಿದ್ದನು ಮತ್ತು ಅದರ ವ್ಯವಹಾರ ನೋಡಿಕೊಳ್ಳುತ್ತಿದ್ದನು.

3. ನನ್ನ ಚಾಲಕ ನನ್ನ ವಾಹನ ಪೊಲೀಸ್ ಠಾಣೆಯಲ್ಲಿದೆ ಎಂದು ಫೋನ್ ಮಾಡಿ ತಿಳಿಸಿದ್ದನು. ನಾನು ನನ್ನ ವಾಹನವನ್ನು ಬಿಡಿಸಿಕೊಂಡಿದ್ದೇನೆ. ಈಗ ತೋರಿಸುತ್ತಿರುವ ಎರಡು ಛಾಯಾ ಚಿತ್ರಗಳಲ್ಲಿ ನನ್ನ ವಾಹನ ಕಾಣಿಸುತ್ತದೆ. ಸಾಕ್ಷಿ ಗುರುತಿಸಿರುವ ಛಾಯಾ ಚಿತ್ರಗಳನ್ನು ನಿ.ಪಿ.3 ಎಂದು ಗುರುತಿಲಾಯಿತು.

4. ನಾನು ನ್ಯಾಯಾಲಯದ ಮುಂದಿರುವ 5 ನೇ ಆರೋಪಿಯನ್ನು ಈ ಮೊದಲು ನೋಡಿರುವುದಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>

5. ದಿನಾಂಕ 28-11-2015 ರಂದು ಈ ಕೇಸಿನ ಐದು ಜನ ಆರೋಪಿತರು ನನ್ನ ವಾಹನವನ್ನು ಬಾಡಿಗೆಯಿಂದ ಪಡೆದಿದ್ದರು ಮತ್ತು ಆ ದಿನ ನಾನೇ ವಾಹನದ ಮೇಲೆ ಚಾಲಕನು ಆಗಿದ್ದನು ಅಂದರೆ ಸರಿಯಲ್ಲ. ನನ್ನನ್ನು ಮತ್ತು ನನ್ನ ವಾಹವನ್ನು ಐದು ಜನ ಆರೋಪಿತರು ಯರಗೇರಾ ಮತ್ತು ಗಿಲ್ಲೆಸುಗೂರು ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದರು ಅಂದರೆ ಸರಿಯಲ್ಲ. ಅವರು 22 ಹಂದಿಗಳನ್ನು ಕಳುವು ಮಾಡಿ ನನ್ನ ವಾಹನದಲ್ಲಿ ಹೇರಿದ್ದರು ಅಂದರೆ ಸರಿಯಲ್ಲ.

6. ಆರೋಪಿ ಸಂ. 1 ರಿಂದ 5 ಇವರು ನನ್ನ ವಾಹನವನ್ನು ನನ್ನೊಂದಿಗೆ ಬಳಗಾನೂರಿನಲ್ಲಿರುವ ಚಾ.ಸಾ1 ಇವರ ಮನೆಗೆ ಕರೆದುಕೊಂಡು ಹೋಗಿ ಅಲ್ಲಿದ್ದ ನಾಲ್ಕು ಟಗರಗುಳನ್ನು ಕಳುವು ಮಾಡಿ ನನ್ನ ವಾಹನದಲ್ಲಿ ಹಾಕಿದ್ದರು ಅಂದರೆ ಸರಿಯಲ್ಲ. 1 ರಿಂದ 5 ನೇ ಆರೋಪಿತರು ಚಾ.ಸಾ1 ಇವಳಿಗೆ ಮಚ್ಚು ತೋರಿಸಿ ಬೆದರಿಕೆ ಹಾಕಿದ್ದನ್ನು ನಾನು ನೋಡಿರುವುದಿಲ್ಲ. ಚಾ.ಸಾ1 ಇವಳನ್ನು ಐದು ಜನ ಆರೋಪಿತರು ಎಳೆದಾಡಿದ್ದರು ಅಂದರೆ ನಾನು ನೋಡಿರುವುದಿಲ್ಲ.

7. ದಿನಾಂಕ 30-11-2015 ರಂದು ವಾಹನದಲ್ಲಿ ನಾನು ಮಸ್ಕಿಯಲ್ಲಿ ಇದ್ದೆನು ಅಂದರೆ ಸರಿಯಲ್ಲ. ಈಗ ತೋರಿಸುತ್ತಿರುವ ನಿ.ಪಿ.3 ರಲ್ಲಿ ನನ್ನ ಭಾವ ಚಿತ್ರಗಳು ಇವೆ.

8. ನಾನೇ ಆ ಸ್ಥಳದಿಂದ ನನ್ನ ವಾಹನವನ್ನು ಪೊಲೀಸ್ ಠಾಣೆಯವರೆಗೆ ಚಲಾಯಿಸಿಕೊಂಡು ಹೋಗಿದ್ದೆನು ಮತ್ತು ಪೊಲೀಸರು ನನ್ನಿಂದ ವಾಹನವನ್ನು ವಶಕ್ಕೆ ಪಡೆದಿದ್ದಾರೆ ಅಂದರೆ ಸರಿಯಲ್ಲ. ನನ್ನ ವಾಹನದಲ್ಲಿ 1 ಮತ್ತು 2 ನೇ ಆರೋಪಿತರು ಇದ್ದರು ಮತ್ತು ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಅಂದರೆ ಸರಿಯಲ್ಲ. ನಾನು ಆ ದಿನ ನ್ಯಾಯಾಲಯ ದ ಮುಂದಿರುವ 5 ನೇ ಆರೋಪಿಯನ್ನು ನೋಡಿದ್ದೇನೆ ಅಂದರೆ ಸರಿಯಲ್ಲ.

9. ನಾನು ಮೇಲೆ ಹೇಳಿದ ಘಟನೆಯನ್ನು ಪ್ರತ್ಯೇಕವಾಗಿ ನೋಡಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿ.ಪಿ.4 ಎಂದು ಗುರುತಿಸಲಾಯಿತು. 5 ನೇ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಘಟನೆಯನ್ನು ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

10. ನನ್ನವಾಹನದ ನಂಬರ್ ಕೆ.ಎ.36-ಬಿ-1878 ಇತ್ತು ಅಂದರೆ ಸರಿ.

ಎಸ್.ಸಿ.**5020/2025**
ಚಾ.ಸಾ **:3** ಪ್ರಾ.ಸಾ **:2**

<u>ಪಾಟೀ ಸವಾಲು**: 5** ನೇ ಆರೋಪಿ ಪರ ವಕೀಲರಿಂದ**:**</u>

(ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು